CAREERINDIA

**Code No. 16**

Total No. of Questions : 61 ] [ Total No. of Printed Pages : 4

**March, 2009**

# OPTIONAL KANNADA

Time : 3 Hours 15 Minutes ] [ Max. Marks : 100

***ಸೂಚನೆ :*** i) ಪ್ರಶ್ನೆಗಳ ಸಂಖ್ಯೆಗಳನ್ನು ಉತ್ತರ ಪತ್ರಿಕೆಯ ಎಡಭಾಗದಲ್ಲಿ ಬರೆಯಿರಿ.

ii) ಪ್ರತಿ ವಿಭಾಗದಲ್ಲಿರುವ ಸೂಚನೆಗಳಿಗೆ ಅನುಗುಣವಾಗಿ ಉತ್ತರಿಸಿ.

**ಭಾಗ – I**

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ : 7 × 1 = 7

1) ನಂದನವನದಲ್ಲಿ ಯಾವ ಯಾವ ಫಲಗಳಿದ್ದವು ?

2) ಸಾಮವೇದಿಗಳು ಶಿಷ್ಯರೊಂದಿಗೆ ಅರಣ್ಯಕ್ಕೆ ಬಂದ ಕಾರಣವೇನು ?

3) ವಿಶ್ವವನ್ನು ವರ್ಣಿಸುವ ರೀತಿಯನ್ನು ಯಾವ ಹೆಸರಿನಿಂದ ಕರೆಯಲಾಗಿದೆ ?

4) ನಾಡು ಯಾವಾಗ ಕೆಡುತ್ತದೆ ?

5) ಭರತೇಶನು ಅರಸಿಯರಿಂದ ಯಾವ ಯಾವ ಕಾಣಿಕೆಗಳನ್ನು ಪಡೆದನು ?

6) ಗೌಡರು ಆಳುಗಳನ್ನು ಕಳಿಸದಿದ್ದಾಗ ದೇವೇಂದ್ರ ಯಾವ ಅಸ್ತ್ರ ತೆಗೆದ ?

7) ಶ್ರೀವೀರಮಲ್ಲರಾಜ ಒಡೆಯನ ರಾಣಿಯ ಹೆಸರೇನು ?

II. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಮೂರಕ್ಕೆ** ಹತ್ತರಿಂದ ಹದಿನೈದು ಪದಗಳಲ್ಲಿ ಉತ್ತರಿಸಿ :3 × 2 = 6

8) ಅಗ್ನಿಯು ಅರ್ಜುನನಲ್ಲಿ ಏನನ್ನು ಬೇಡಿದ ? ಏಕೆ ?

9) ಊರ್ವಶಿಯ ರೋಷದ ವರ್ಣನೆಯನ್ನು ಕವಿ ಹೇಗೆ ಮಾಡಿದ್ದಾನೆ ?

10) ಉದಯಕಾಲದಲ್ಲಿ ಭರತನು ಹೇಗೆ ಶೋಭಿಸುತ್ತಿದ್ದನು ?

11) ಸರ್ವಜ್ಞತ್ವವು ಹೇಗೆ ಪ್ರಾಪ್ತವಾಗುತ್ತದೆ ?

12) ಮೇಟಿ ವಿದ್ಯೆಯ ಮಹತ್ವಕ್ಕೆ ಕಾರಣವೇನು ?

III. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಮೂವತ್ತರಿಂದ ನಲವತ್ತು ಪದಗಳಲ್ಲಿ ಉತ್ತರಿಸಿ : 2 × 3 = 6

13) ಸ್ತ್ರೀಯರು ಪ್ರಕೃತಿ ಬಳಿ ಏನೆಂದು ಕ್ಷಮೆ ಕೇಳಿದರು ?

[ Turn over

www.careerindia.com

CAREERINDIA



14) ವೇಷಧಾರಿ ಶಿವನು ಸಾಮವೇದಿಗಳಿಗೆ ತನ್ನ ನಿಜರೂಪವನ್ನು ಹೇಗೆ ತೋರಿಸಿದನು ?

15) ಇಂದ್ರ ಸಭೆಯ ಸ್ವರೂಪವನ್ನು ತಿಳಿಸಿ.

16) 'ಮನುಷ್ಯ ಶರೀರ'ದ ಧರ್ಮವನ್ನು ಅರ್ಜುನನು ಹೇಗೆ ಹೇಳಿದ್ದಾನೆ ?

IV. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡಕ್ಕೆ** ನಲವತ್ತರಿಂದ ಅರವತ್ತು ಪದಗಳಲ್ಲಿ ಉತ್ತರಿಸಿ : $2 \times 5 = 10$

17) ಪಂಪ ಬಣ್ಣಿಸಿರುವ ನಂದನವನದ ಚೆಲುವು ಎಂತಹುದು ?

18) ಸಾಮವೇದಿಗಳ ಪಾಂಡಿತ್ಯ ಮತ್ತು ಪ್ರಭಾವಗಳನ್ನು ಕವಿ ಹೇಗೆ ವರ್ಣಿಸಿದ್ದಾನೆ ?

19) ಶ್ವಪಚದೇವರು ಶಿವನನ್ನು ಅರ್ಚಿಸುತ್ತಿದ್ದ ಬಗೆ ಯಾವುದು ?

20) ಅರ್ಜುನನ ವ್ಯಕ್ತಿತ್ವವನ್ನು ಕುಮಾರವ್ಯಾಸನು ಹೇಗೆ ಚಿತ್ರಿಸಿದ್ದಾನೆ ?

V. ಕೆಳಗಿನ ಪದ್ಯಗಳಲ್ಲಿ **ಎರಡರ** ಸಂದರ್ಭ ಸೂಚಿಸಿ ಮಹತ್ವವನ್ನು ತಿಳಿಸಿ : $2 \times 3 = 6$

21) ಉರಗನ ಹಲು ನಂಜು ಸುರಿಗೆಯ ಮೊನೆ ನಂಜು
ಕರುಣವಿಲ್ಲದವನ ನುಡಿ ನಂಜು। ದುರ್ಜನರ
ಇರವೆಲ್ಲ ನಂಜು ಸರ್ವಜ್ಞ.

22) ಉಡುರಾಜಂ ಕಳೆಗುಂದಿ ಪೆರ್ಚಿದಿಹನೇ ನ್ಯಗ್ರೋಧಬೀಜಂ ಕಿಲಂ।
ಸಿಡಿದುಂ ಪೆರ್ಮರನಾಗದೇ ಎಳೆಗರುಂ ಎತ್ತಾಗದೇ ಲೋಕದೊಳ್॥
ಮಿಡಿ ಪಣ್ಣಾಗದೆ ದೈವದೊಲ್ಮೆಯಿರಲಾ ಕಾಲಾನುಕಾಲಕ್ಕೆ ತಾಂ।
ಬಡವಂ ಬಲ್ಲಿದನಾಗನೇ ಹರಹರಾ ಶ್ರೀಚೆನ್ನಸೋಮೇಶ್ವರಾ॥

23) ನೀರಸವೀ ಸಂಸಾರವೆಂದು ನೆನೆದು ಹೇಸಿ
ಬೆರಳ ಮಿಡಿವಳೋ ಯೆಂಬಂತೆ
ನರನಾಥನೆದೆಗೆ ಕಾಣಿಸಿತಾಕೆ ತಂತಿಯ
ಬೆರಳಿಂದ ಮಿಡಿದ ಬಿನ್ನಾಣ.

VI. ಕೆಳಗಿನ ಸಾಲುಗಳಲ್ಲಿ **ಎರಡರ** ಸಂದರ್ಭವನ್ನು ಸೂಚಿಸಿ ಮಹತ್ವವನ್ನು ವಿವರಿಸಿ : $2 \times 2 = 4$

24) ತರುಗಳ್ ನಿನ್ನಂತೆ ಚೆನ್ನಂಗಳೇ.

25) ಈತನ ಮಾತು ಮಾತಲ್ಲ.

26) ನಾ ಸೋಲ್ತುಡವರ್ಗಳೇ ಗುರುವೆನುತ.

27) ಭಾರತ ವರುಷ ನಿಮ್ಮದು ಪುಣ್ಯಭೂಮಿ ಕಣ.

## ಭಾಗ – II

VII. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡಕ್ಕೆ** ನಲವತ್ತರಿಂದ ಅರವತ್ತು ಪದಗಳಲ್ಲಿ ಉತ್ತರಿಸಿ : $2 \times 5 = 10$

28) ದೇವೇಂದ್ರ ಊರಿಗೆ ಬರುವಾಗ ದಾರಿಯಲ್ಲಿ ಯಾರು ಯಾರು ಸಹಾಯ ಮಾಡುತ್ತಾರೆ ? ಅದರ ವಿವರಗಳನ್ನು ತಿಳಿಸಿ.

29) ದೇವೇಂದ್ರನ ತಾಯಿ ಮನೆತನವನ್ನು ಹೇಗೆ ನಿಭಾಯಿಸಿದಳು ?

30) ಖನ್ನಾ ದೇವೇಂದ್ರನಿಗೆ ಏನಾಗಿದ್ದ ? ಆತನ ಬಗ್ಗೆ ದೇವೇಂದ್ರನಿಗೆ ಅಸಮಾಧಾನವೇಕೆ ?

www.careerindia.com

CAREERINDIA



VIII. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಒಂದಕ್ಕೆ** ಅರವತ್ತರಿಂದ ಎಂಬತ್ತು ಪದಗಳಲ್ಲಿ ಪ್ರಬಂಧ ಬರೆಯಿರಿ : $1 \times 10 = 10$

31) ದೇವೇಂದ್ರನ ತಂದೆಯ ಪಾತ್ರವನ್ನು ಚಿತ್ರಿಸಿ.

32) ಗಿಲ್ ಯಾರು ? ದೇವೇಂದ್ರನಿಗೂ ಅವನಿಗೂ ಇದ್ದ ಸಂಬಂಧ ಎಂತಹುದು ? ಅವನು ದೇವೇಂದ್ರನಿಗೆ ನಿರೂಪಿಸಿದ ಕಥೆಯನ್ನು ತಿಳಿಸಿ.

## ಭಾಗ – III

IX. ಕೆಳಗಿನ ಸಾಲುಗಳಲ್ಲಿ ಯಾವುದಾದರೂ **ಎರಡರ** ಸಂದರ್ಭವನ್ನು ಸೂಚಿಸಿ ಮಹತ್ವವನ್ನು ವಿವರಿಸಿ : $2 \times 2 = 4$

33) ಮಹಾಸ್ವಾಮಿ ನಾನು ಹುಟ್ಟಿದ್ದು ಸಾರ್ಥಕವಾಯ್ತು.

34) ಇನ್ ಸಿಡಿಲ್ಗೆ ನೀನ್ ಅಂಬನ್ನ ಹೂಡಬೇಡ ಕಂಡೆಯಾ !

35) ನಾನು ತಿಳಿಗನ್ನಡದಲ್ಲಿಯೇ ಹೇಳಿದೆನೆಂದು ನನಗೆ ಜ್ಞಾಪಕವಣ್ಣ.

X. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡಕ್ಕೆ** ಮೂವತ್ತರಿಂದ ನಲವತ್ತು ಪದಗಳಲ್ಲಿ ಉತ್ತರಿಸಿ : $2 \times 3 = 6$

36) ಅಂತೆಂಬರ ಗಂಡ ಒಬ್ಬರೇ ಎಂಬುದನ್ನು ನಂಜಶೆಟ್ಟಿ ಹೇಗೆ ಹೇಳಿದನು ?

37) ಮಾದೇವಮ್ಮಣ್ಣಿ ಕೆರಳಲು ಕಾರಣವೇನು ?

38) ನಾಮಧೇಯದ ಬಗ್ಗೆ ಮಹಾರಾಜರ ಅಭಿಪ್ರಾಯವೇನು ?

XI. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಒಂದಕ್ಕೆ** ಅರವತ್ತರಿಂದ ಎಂಬತ್ತು ಪದಗಳಲ್ಲಿ ಪ್ರಬಂಧವನ್ನು ಬರೆಯಿರಿ : $1 \times 10 = 10$

39) ಮೈಸೂರು ಮಹಾರಾಜರ ಪಾತ್ರವನ್ನು ವಿವರಿಸಿ.

40) ಮಾದೇವಮ್ಮಣ್ಣಿಯ ವ್ಯಕ್ತಿತ್ವವನ್ನು ಸವಿವರವಾಗಿ ನಿರೂಪಿಸಿ.

## ಭಾಗ – IV

XII. ಕೆಳಗಿನ ಪದಗಳಲ್ಲಿ ಯಾವುದಾದರೂ **ಎರಡಕ್ಕೆ** ಟಿಪ್ಪಣಿ ಬರೆಯಿರಿ : $2 \times 2 = 4$

41) ಅಜಮುಖಿ ವ್ಯಾಪ್ತಿ

42) ಖಾಂಡವ ವನ

43) ತ್ರಿಪದಿ

XIII. ಕೆಳಗಿನ ಶಬ್ದಗಳಲ್ಲಿ ಯಾವುದಾದರೂ **ನಾಲ್ಕರ** ಅರ್ಥ ತಿಳಿಸಿ : $4 \times \frac{1}{2} = 2$

44) ಆಮ್ರ

45) ನನೆ

46) ಅಗ್ಗಳ

47) ಸೈಪು

48) ನಿಕರ

49) ಇಭ



www.careerindia.com

CAREERINDIA



XIV. ಕೆಳಗಿನ ಶಬ್ದಗಳಲ್ಲಿ ಯಾವುದಾದರೂ **ಮೂರು** ಪದಗಳಿಗೆ ನಾನಾರ್ಥಕ ಪದಗಳನ್ನು ಬರೆಯಿರಿ : 3 × 1 = 3

50) ಕವಿ

51) ರಾಗ

52) ನೆರೆ

53) ಆಳು

54) ಎಸೆ

XV. ಕೆಳಗಿನ ನುಡಿಗಟ್ಟುಗಳಲ್ಲಿ **ಎರಡನ್ನು** ಬಳಸಿ ವಾಕ್ಯಗಳನ್ನು ರಚಿಸಿ : 2 × 1 = 2

55) ಓಬೀರಾಯನ ಕಾಲ

56) ಮೂಗುತೂರಿಸು

57) ತಲೆಬಾಗು

58) ನಾಚಿನೀರಾಗು

## ಭಾಗ – V

XVI. ಕೆಳಗಿನ **ಎರಡು** ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ : 2 × 5 = 10

59) ಈ ಕೆಳಗಿನ ಪದ್ಯಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ತಿಳಿಸಿ :

ಉರಿ ಕೊಳೆ ದೆಸೆಗಾಣದೆ ದೆಸೆ
ವರಿವರಿದು ಕುಜಂಗಳಂ ಪಡಲ್ವಡಿಸಿ ಭಯಂ
ಬೆರಸೊಳಱೆ ನೆಗೆದುದಾ ವನ
ಕರಿ ಶರಭ ಕಿಶೋರ ಕಂಠಗರ್ಜನೆ ಬನದೊಳ್.

60) ಈ ಕೆಳಗಿನ ಗದ್ಯಭಾಗವನ್ನು ಹೊಸಗನ್ನಡಕ್ಕೆ ಅನುವಾದಿಸಿ :

ಆ ವೃದ ಮಾಹೇಶ್ವರನಂ ಕುಮಾರನಲ್ಲಿಗೊಡಗೊಂಡು ಬರ್ಪಾಗಳು ತಾನೆಮ್ಮ ತೊತ್ತಿನ ಮಗಂ ತನ್ನ ಭವಮಂ ಮಱೆದನೆ ಎನ್ನ ಪರಿಯೆಲ್ಲವ ನೀಗಳೆ ತೋಱಿಕೊಟ್ಟಪೆಂ ತನ್ನೆರವಿನ ಸಿರಿಯಂ ನಂಬಿ ಎನ್ನಂ ಮಱೆದಡಾಂ ಬಿಡುವನಲ್ಲೆಂದು ಕೆಲಬಲದವರ್ ಕೇಳ್ವಂತೆ ಗುಜುಗುಜುಗೊಳುತುಂ ಬಂದು ಕುಮಾರನ ಮುಂದೆ ನಿಂದಿರ್ದ್ದ.

61) ಕೆಳಗೆ ಸೂಚಿಸಿರುವ ಯಾವುದಾದರೂ ಒಂದು ವಸ್ತುವಿನ ಬಗೆಗೆ ಸ್ವಂತ ಕತೆ / ಕವಿತೆಯನ್ನು ರಚಿಸಿ :

ಅ) ದೇಶಭಕ್ತಿ

ಆ) ಮಳೆ

www.careerindia.com